**ಓ.ಎಸ್ ನಂ.7701/2013**
**ಡಿ.ಡಬ್ಲ್ಯೂ: 1**

**<u>ದಿನಾಂಕ:20.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ವಾದಿ ಪರ ವಕೀಲರಿಂದ:-</u>**

ನಾನು 8 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ಬಿಎಂಟಿಸಿ ಬಸ್ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ವಾದಿ ನಾರಾಯಣಪ್ಪ ನನ್ನ ತಂದೆಗೆ ಸ್ನೇಹಿತನಾಗಿದ್ದನು. ನಾರಾಯಣಪ್ಪನ ಮಗ ದೇವರಾಜು ನನಗೆ ಪರಿಚಯವಿರುವುದಿಲ್ಲ. ಸಾಕ್ಷಿ ಮುಂದುವರೆದು ನಾರಾಯಣಪ್ಪನಿಗೆ ದೇವರಾಜು ಮಗ ಆಗಿರುವುದಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗಳು ವಾದಿ ನಾರಾಯಣಪ್ಪನಿಗೆ ಸೇರಿದೆ ಎನ್ನುವುದು ಸರಿಯಲ್ಲ. ನಾರಾಯಣಪ್ಪ ತೀರಿಕೊಂಡ ಮೇಲೆ ದಾವಾ ಆಸ್ತಿಗಳು ಆತನ ಮಗ ದೇವರಾಜು ಈತನಿಗೆ ಸೇರಬೇಕು ಎಂದರೆ ಸಾಕ್ಷಿ ದೇವರಾಜು ಆತನ ಮಗನೇ ಅಲ್ಲ ಎನ್ನುತ್ತಾರೆ. ನನ್ನ ತಂದೆ ಮತ್ತು ವಾದಿ ನಾರಾಯಣಪ್ಪ ಒಂದೇ ಗ್ರಾಮದಲ್ಲಿ ವಾಸಿಸುತ್ತಿದ್ದರು ಮತ್ತು ಪರಿಚಯಸ್ಥರು ಆಗಿದ್ದರು. ವಾದಿಯ ಮನೆ ನಮ್ಮ ಮನೆಯಿಂದ ಸುಮಾರು 200 ಮೀ. ದೂರದಲ್ಲಿದೆ. ವಾದಿ ದೇವರಾಜು ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾನೆ ಎನ್ನುವುದು ಸರಿಯಲ್ಲ.

**<u>ಈ ಹಂತದಲ್ಲಿ ಪಾಟೀಸವಾಲಿಗೆ ಸಮಯ ಕೇಳಿದರು, ಸಮಯ ನೀಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**